ದಿನಾಂಕ**: 28-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ**-1** ರಿಂದ **3** ನೇ ಪ್ರತಿವಾದಿಯ ಪರ ಶ್ರೀ**.** ಎಲ್**.** ಎಂ**,** ವಕೀಲರಿಂದ**:-**

**01.** ಗಂಗನರಸಿಂಹಯ್ಯನವರು ನನ್ನ ಯಜಮಾನರು. ನಾನು ಅವರನ್ನು 1994 ನೇ ಇಸವಿಯ ಮೇ ತಿಂಗಳಿನ 9 ಮತ್ತು 10 ನೇ ತಾರೀಖಿನಂದು ಸಾವನದುರ್ಗ ದೇವಸ್ಥಾನದಲ್ಲಿ ಮದುವೆ ಆಗಿರುತ್ತೇನೆ. ನಮ್ಮ ಮದುವೆಯನ್ನು ನಮ್ಮ ಕುಟುಂಬದವರೇ ಒಪ್ಪಿ ಮಾಡಿರುತ್ತಾರೆ. ನಮ್ಮ ಮದುವೆಗೆ ನಮ್ಮ ಗ್ರಾಮದವರೆಲ್ಲರೂ ಬಂದಿದ್ದರು. ಆವರ ಪೈಕಿ ಸೋಲೂರಿನ ಸಿದ್ದಮ್ಮ ಮತ್ತು ಅವರ ಯಜಮಾನರಾದ ಗಂಗನರಸಿಂಹಯ್ಯನವರು ಸಹ ಬಂದಿದ್ದರು. ನಮ್ಮ ಮದುವೆ ಆದ ನಂತರ ನಾವು ಬೈರನಹಳ್ಳಿಗೆ ಬಂದೆವು. ಅಲ್ಲಿ ನಾವು 3 ವರ್ಷಗಳ ಕಾಲ ಇದ್ದೇವು. ಸದರಿ 3 ವರ್ಷದ ಅವಧಿಯಲ್ಲಿ ನನಗೆ ಚುನಾವಣಾ ಗುರುತಿನ ಚೀಟಿ ಮತ್ತು ಪಡಿತರ ಚೀಟಿಯನ್ನು ನೀಡಿರುವುದಿಲ್ಲ. ನೀವು ಪಡಿತರ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿಯನ್ನು ಪಡೆಯಲು ತಾಲ್ಲೂಕು ಕಛೇರಿಗೆ ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನೀವು ಗಂಗನರಸಿಂಹಯ್ಯನವರನ್ನು ಮದುವೆ ಆಗಿರುವುದಿಲ್ಲ ಮತ್ತು ಅವರ ಜೊತೆಯಲ್ಲಿ ಎಂದಿಗೂ ಸಹ ಬೈರನಹಳ್ಳಿ ಗ್ರಾಮದಲ್ಲಿ ವಾಸಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಗಂಗನರಸಿಂಹಯ್ಯನವರು ಮೊದಲು ಬಸ್ಸಿನ ನಿರ್ವಾಹಕರಾಗಿ ಕೆಲಸವನ್ನು ಮಾಡುತ್ತಿದ್ದರು , ನಂತರ ಅವರಿಗೆ ನನ್ನ ತಂದೆಯು ಶಿಕ್ಷಕರ ಕೆಲಸವನ್ನು ಕೊಡಿಸಿದರು. ಎಷ್ಟು ಬಾರಿ ಎಚ್ಚರಿಸಿದರೂ ಸಹ ಸಾಕ್ಷಿಯು ಪಾಟೀ ಸವಾಲನ್ನು ಮಾಡಲು ತೊಂದರೆಯನ್ನು ನೀಡಿರುತ್ತಾರೆ. ಗಂಗನರಸಿಂಹಯ್ಯನವರು ಬಸ್ಸಿನ ನಿರ್ವಾಹಕರಾಗಿ ಮಾಗಡಿ, ತುಮಕೂರು ಮತ್ತು ಕುದೂರಿನಲ್ಲಿ ಕೆಲಸವನ್ನು ಮಾಡಿರುತ್ತಾರೆ. ಗಂಗನರಸಿಂಹಯ್ಯನವರು ಯಾವ

ವರ್ಷದಲ್ಲಿ ನಿರ್ವಾಹಕರಾಗಿ ಕೆಲಸಕ್ಕೆ ಸೇರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆ ಸಮಯದಲ್ಲಿ ಯಾವುದೇ ಫೋಟೋವನ್ನು ತೆಗೆದಿರುವುದಿಲ್ಲ. ಆ ಸಮಯದಲ್ಲಿ ಫೋಟೋವನ್ನು ಮದುವೆ ಕಾಲದಲ್ಲಿ ತೆಗೆಯುತ್ತಿದ್ದರು



ಎಂದರೆ ಸಾಕ್ಷಿಯು ಗಂಗನರಸಿಂಹಯ್ಯನವರು ನನ್ನನ್ನು ತುರ್ತಾಗಿ ಮದುವೆ ಆಗಿದ್ದ ಕಾರಣ ಫೋಟೋವನ್ನು ತೆಗೆಸಲಿಲ್ಲ ಎನ್ನುತ್ತಾರೆ. ಗಂಗನರಸಿಂಹಯ್ಯನವರು ಯಾವ ಕಾರಣಕ್ಕಾಗಿ ನಿಮ್ಮನ್ನು ತುರ್ತಾಗಿ ಮದುವೆ ಆದರು ಎಂದರೆ ಸಾಕ್ಷಿಯು ಅವರು ಹೆಣ್ಣನ್ನು ಕೇಳಲು ಬಂದ ಸಮಯದಲ್ಲಿ ನನ್ನ ತಾಯಿಯ ತಾಯಿ 9 ಮತ್ತು 10 ನೇ ತಾರೀಖಿನಂದು ಮದುವೆ ಆಗಲು ಒಳ್ಳೆಯ ದಿವಸ ಎಂದು ಹೇಳಿದ ಕಾರಣ ಅವರು ಆ ದಿನದಂದು ತನ್ನನ್ನು ತುರ್ತಾಗಿ ಮದುವೆ ಆದರು ಎನ್ನುತ್ತಾರೆ.

02. ನನ್ನ ತಾಯಿಯ ಮನೆ ತುಮಕೂರು ಜಿಲ್ಲೆಯ ಕೊರಟಗೆರೆ ತಾಃ ಮಣ್ಣೂರು ತಿಮ್ಮನಹಳ್ಳಿ ಆಗಿದೆ. ನನ್ನ ತಾಯಿ ಮನೆಯಿಂದ ಮಾಗಡಿಗೆ ಸುಮಾರು 60 ಕಿ. ಮೀ. ನಷ್ಟು ಅಂತರವಿದೆ. ನನ್ನ ಮದುವೆ ಗೆ ನನ್ನ ತಾಯಿಯ ಮನೆ ಕಡೆಯಿಂದ 4 ಜನರು ಬಂದಿದ್ದರು. ನಿಪಿ-20 ನನ್ನ ಮದುವೆಯ ಆಮಂತ್ರಣ ಪತ್ರಿಕೆ ಆಗಿದೆ ಮತ್ತು ಅದನ್ನು ಕೊರಟಗೆರೆಯಲ್ಲಿ ಮಾಡಿಸಿದ್ದೇವೆ. ನಿಪಿ-20 ನ್ನು ಮಾಡಿಸಲು ನಾನು ಮತ್ತು ನನ್ನ ಯಜಮಾನರು ಅಂಗಡಿಗೆ ಹೋಗಿರುತ್ತೇವೆ. ನಿಪಿ-20 ನ್ನು ನಾನು ಶಿವಮ್ಮ ಟಾಕೀಸ್ ಹತ್ತಿರ ಇರುವ ಅಂಗಡಿಯಲ್ಲಿ ಮಾಡಿಸಿದ್ದೇನೆ, ಸದರಿ ಅಂಗಡಿಯ ಹೆಸರು ನನಗೆ ನೆನಪಿಲ್ಲ. ನಿಪಿ-20 ನ್ನು ನೀವು ಈ ದಾವೆಗಾಗಿ ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಮದುವೆ ಆದ ಸಮಯದಲ್ಲಿ ಕಂಪ್ಯೂಟರ್ ನಲ್ಲಿ ಬೆರಳಚ್ಚನ್ನು ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

03. 2 ನೇ ವಾದಿಯು ನನ್ನ ಮಗನಾಗಿರುತ್ತಾರೆ. ನನ್ನ ಮಗನ ಜನ್ಮ ದಿನಾಂಕ.16-06-1996 ಅಥವಾ ದಿ.18-06-1996 ಆಗಿರಬಹುದು. 2 ನೇ

ವಾದಿಯು ತುಮಕೂರಿನ ಕ್ಯಾತಸಂದ್ರ ಸರ್ಕಾರಿ ಆಸ್ಪತ್ರೆಯಲ್ಲಿ ಜನಿಸಿರುತ್ತಾರೆ. 2 ನೇ ವಾದಿಯ ಜನನ ಪ್ರಮಾಣಪತ್ರವನ್ನು ಹಾಜರುಪಡಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 2 ನೇ ವಾದಿಯು ಗಂಗನರಸಿಂಹಯ್ಯನವರ ಮಗನಾಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. 2 ನೇ ವಾದಿಯು ಗಂಗನರಸಿಂಹಯ್ಯನವರ



ಮಗನಾಗಿದ್ದ ಪಕ್ಷದಲ್ಲಿ ನೀವು ನ್ಯಾಯಾಲಯಕ್ಕೆ 2 ನೇ ವಾದಿಯ ಜನನ ಪ್ರಮಾಣಪತ್ರವನ್ನು ಹಾಜರುಪಡಿಸಬಹುದಿತ್ತು ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು**,** ಸಮಯ ನೀಡಲಾಯಿತು**.**

ಓ**.** ಹೇ**.** ಕೇ**.** ಸ**.** ಇ**.** ಎ**.** ಓಪ್ಪಿರುತ್ತಾರೆ**,**

**2** ನೇ ಅ**.** ಸಿ**.** ಜ**.** ಮತ್ತು ಜೆ**.**ಎಂ**.**ಎಫ್**.**ಸಿ**,**
ಮಾಗಡಿ